7. **ವಿಷಯ: ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಗ್ರಾಮದಲ್ಲಿ ವಿದ್ಯುತ್ ವಿತರಣಾ ಕೇಂದ್ರದ ಮಂಜೂರಾತಿ ವಿಳಂಬವಾಗುತ್ತಿರುವ ಬಗ್ಗೆ.**

ಶ್ರೀ ಹೆಚ್.ಕೆ.ಕುಮಾರಸ್ವಾಮಿ[ಸಕಲೇಶಪುರ]: ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಗ್ರಾಮದಲ್ಲಿ ವಿದ್ಯುತ್ ವಿತರಣಾ ಕೇಂದ್ರದ ಮಂಜೂರಾತಿಗೆ ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಹೆತ್ತೂರು ಗ್ರಾಮಕ್ಕೆ 66/11 ಕೆವಿ ವಿದ್ಯುತ್ ಉಪಕೇಂದ್ರವು ಮಂಜೂರಾಗಿರುತ್ತದೆ. ಪ್ರಸ್ತುತ ಹೆತ್ತೂರು ಗ್ರಾಮಕ್ಕೆ 12 ಕಿಲೋ ಮೀಟರ್ ದೂರದಲ್ಲಿರುವ ಯಸಳೂರು ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. ಸದರಿ ಉಪಕೇಂದ್ರದಲ್ಲಿ 1 ಸಂಖ್ಯೆಯ 6.3 ಒಗಿಂ ಸಾಮರ್ಥ್ಯದ ಪರಿವರ್ತಕವು ಕಾರ್ಯ ನಿರ್ವಹಿಸುತ್ತಿದೆ. 2013–14 ನೇ ಸಾಲಿನಲ್ಲಿ ಈ ಉಪಕೇಂದ್ರದ ಪೀಕ್‌ಲೋಡ್ 2.05 ಮೆಗಾವ್ಯಾಟ್‌ನಷ್ಟಿದ್ದು, ಹಾಲಿ ಇರುವ ವಿದ್ಯುತ್ ಉಪಕೇಂದ್ರದ ಮೇಲೆ ಶೇಕಡಾ 39 ರಷ್ಟು ಮಾತ್ರ ವಿದ್ಯುತ್ ಹೊರೆಯಿರುತ್ತದೆ.

ಹೆತ್ತೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿದ್ಯುತ್ ಉಪಕೇಂದ್ರಕ್ಕೆ ಅಗತ್ಯವಿರುವ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದರೂ ಸಹಾ, ತಾಂತ್ರಿಕ ಆರ್ಥಿಕ ಸಮರ್ಥನೆಯ ದೃಷ್ಟಿಯಿಂದ ಹೆತ್ತೂರು ಭಾಗದ ವಿದ್ಯುತ್ ಬೇಡಿಕೆಯ ಹೆಚ್ಚಳವನ್ನು ಗಮನಿಸಿ. ಮುಂದಿನ ವರ್ಷಗಳಲ್ಲಿ ಹೆತ್ತೂರಿನಲ್ಲಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು: ಮುಂದಿನ ವರ್ಷವೆಂದರೆ, 2015–16.

ಶ್ರೀ ಡಿ.ಕೆ.ಶಿವಕುಮಾರ್[ಮಾನ್ಯ ಇಂಧನ ಸಚಿವರು]: ಮಾನ್ಯ ಅಧ್ಯಕ್ಷರೆ, ಏನಾಗುತ್ತದೆಂದರೆ, ನಮ್ಮ ಇಲಾಖೆಯಲ್ಲಿ 3–4 ತಿಂಗಳಿಗೆ ಇದನ್ನು ಮಾಡುವುದಕ್ಕಾಗುವುದಿಲ್ಲ, ಇದಕ್ಕೆ proper programme ಮಾಡಬೇಕು.

ಸುಮಾರು 12 ಕಿ.ಮೀ ಒಂದು ಲೈನ್ ಹೋಗಬೇಕು, ಅವರೆಲ್ಲಾ ಪರ್ಮಿಷನ್ ಕೊಡಬೇಕು, ರೈತರೆಲ್ಲಾ ಮಾಡಬೇಕು. ಒಂದು ಸಾರಿ ಪ್ರೋಗ್ರಾಂನಲ್ಲಿ ಸೇರಿತ್ತೆಂದರೆ ಅದನ್ನು ಮಾಡುತ್ತೇವೆ. ಸಾಮಾನ್ಯವಾಗಿ ನಮ್ಮ ಇಲಾಖೆಯಲ್ಲಿ ಕಮಿಟ್ ಮಾಡಿಕೊಳ್ಳುವುದಿಲ್ಲ. ಕಮಿಟ್ ಮಾಡಿಕೊಳ್ಳುತ್ತೇವೆಂದರೆ, ಇವತ್ತಲ್ಲ ಇನ್ನೆರೆಡು ದಿವಸ ನಿಧಾನವಾದರೂ ನಿಮ್ಮ ಕೆಲಸವಾಗುತ್ತದೆಂದು ತಿಳಿದುಕೊಳ್ಳಿ.

ಅಧ್ಯಕ್ಷರು: ಕಮಿಟ್ ಮಾಡಿದ್ದಾರೆ ಬಿಡಿ, ಇನ್ನು 5–6 ತಿಂಗಳಲ್ಲಿ ಆಗುತ್ತದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಬೇಗ ಆಗಲಿ ಎಂದು ಹೇಳುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಆದಷ್ಟು ಬೇಗ ಮಾಡಿಕೊಡುತ್ತೇನೆ, ಅಲ್ಲಿ ನಮ್ಮ ನೆಂಟರೆಲ್ಲಾ ಇದ್ದಾರೆ, ನಾನು ಬರಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಏನಗಿದೆ ಎಂದರೆ, ತಾವು ಉತ್ತರ ಕೊಟ್ಟಿದ್ದಕ್ಕೆ ನಾನು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ, ಏನಾಗಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕಳೆದ ಅಧಿವೇಶನದಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದೆ, ಈ ಎಲ್ಲಾ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು ಉಪಕೇಂದ್ರದ ನಿರ್ಮಾಣಕ್ಕಿರುವ ಮಾನದಂಡಗಳನ್ನು ಸಡಲಿಸಿ ವಿಶೇಷ ಪ್ರಕರಣವನ್ನು ಪರಿಗಣಿಸಿ ಉಪಕೇಂದ್ರದ ಸ್ಥಾಪನೆಗೆ KPTCL ತಾಂತ್ರಿಕ ಸಮಿತಿಯ ಅನುಮೋದನೆ ಪಡೆದು ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು 7 ತಿಂಗಳ ಹಿಂದೆ ಹೇಳಿದ್ದಾರೆ. ಅಧಿಕಾರಿಗಳು ಬೇಕೆಂದೇ ಇಲ್ಲಸಲ್ಲದ ಸಮಸ್ಯೆಯನ್ನು ಹುಟ್ಟುಹಾಕಿ ವಿಳಂಬ ಮಾಡುತ್ತಿದ್ದಾರೆ.

ಶ್ರೀ ಡಿ.ಕೆ.ಶಿವಕುಮಾರ್: ಎಷ್ಟೋ ವಿಚಾರಗಳನ್ನು ಸಡಿಲ ಮಾಡಿದ್ದೇವಲ್ಲಾ, ಬೇಕಾದರೆ ಕೇಳಿ. ಎಷ್ಟೋ ಕ್ಷೇತ್ರದಲ್ಲಿ ನಾವು commitement ಮಾಡಿಕೊಳ್ಳುವುದಿಲ್ಲ, ಒಂದೊಂದು ಕೊಟ್ಟರೂ ಕಷ್ಟ. ಅಂಥದರಲ್ಲಿ ನಿಮ್ಮ reasonable ಕ್ಷೇತ್ರಕ್ಕೆ ಆಗಿ consider ಮಾಡಿದ್ದೇವೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮುಂದಿನ ವರ್ಷಗಳಲ್ಲಿ ಬೇಡ, ನಾವು ಸೈಟ್ ಕೊಟ್ಟಿದ್ದೇವೆ, ದಯಮಾಡಿ ಈ ವರ್ಷವೇ ಪ್ರಾರಂಭ ಮಾಡಿ.

8. ವಿಷಯ : ಆಶಾ ಕಾರ್ಯಕರ್ತರಿಗೆ ಪ್ರೋತ್ಸಾಹಧನ ನೀಡಲು ಸರ್ಕಾರ ಆದೇಶ ಹೊರಡಿಸದೆ ವಿಳಂಬ ನೀತಿ ಅನುಸರಿಸುತ್ತಿರುವ ಹಾಗೂ ಈ ಕಾರ್ಯಕರ್ತರಿಗೆ ಜನಶ್ರೀ ಭೀಮಾ ಯೋಜನೆ ವಿಸ್ತರಣೆ, ಕನಿಷ್ಠ ಕೂಲಿ ಹಾಗೂ ಪಿಂಚಣಿ ಸೌಲಭ್ಯ ಒದಗಿಸುವ ಬಗ್ಗೆ

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ): ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಆಶಾ ಕಾರ್ಯಕರ್ತರಿಗೆ ಮಾಸಿಕ ` 1000 ಪ್ರೋತ್ಸಾಹ ಧನ ನೀಡಲು ಸರ್ಕಾರ ಒಪ್ಪಿಗೆ ನೀಡದ್ದರೂ ಸಹ ಈವರೆಗೂ ಯಾವುದೇ ಆದೇಶ ಹೊರಡಿಸಿರುವುದಿಲ್ಲ. ಇದರಿಂದ ರಾಜ್ಯಾದ್ಯಂತ ಇರುವ ಸಾವಿರಾರು ಕಾರ್ಯಕರ್ತರಿಗೆ ನೀಡುವ ಗೌರವಧನದ ಬಗ್ಗೆ ಕೂಡಲೇ ಸರ್ಕಾರ ಆದೇಶ ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಈಗಾಗಲೇ ಮುಷ್ಕರ, ಧರಣಿಗೆ ಮುಂದಾಗಿದ್ದರು. ಆರೋಗ್ಯ ಸಹಾಯ ಪ್ರಕರಣಗಳನ್ನು ಆಧರಿಸಿ ಮಾಸಿಕ ಧನಸಹಾಯವನ್ನು ನೀಡಲು ಸರ್ಕಾರ ಒಪ್ಪಿದ್ದರೂ ಈಗ ನೀಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿದೆ. ಈ ಕಾರ್ಯಕರ್ತರಿಗೆ ಜನಶ್ರೀ ಭೀಮಾ ಯೋಜನೆ ವಿಸ್ತರಣೆ, ಕನಿಷ್ಠ ಕೂಲಿ ಹಾಗೂ ಪಿಂಚಣಿ ಸೌಲಭ್ಯ ಒದಗಿಸುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರ ಗಮನ ಸೆಳೆಯುತ್ತೇನೆ.

ಡಾ.ಹೆಚ್.ಸಿ.ಮಹದೇವಪ್ಪ(ಮಾನ್ಯ ಲೋಕೋಪಯೋಗಿ ಸಚಿವರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ ಆಶಾ ಕಾರ್ಯಕರ್ತೆಯರುಗಳ ಪ್ರೋತ್ಸಾಹ ಧನವನ್ನು ಹೆಚ್ಚಿಸುವ ನಿಟ್ಟಿನಲ್ಲಿ 2013–2014 ನೇ ಸಾಲಿನಿಂದ ರಾಜ್ಯದ ಆಶಾ ಕಾರ್ಯಕರ್ತೆಯರಿಗೆ (ASHA) ಕೇಂದ್ರ ಸರ್ಕಾರವು ನೀಡುತ್ತಿರುವ ಪ್ರೋತ್ಸಾಹಧನದ ಜೊತೆಗೆ ರಾಜ್ಯ ಸರ್ಕಾರವು ಮ್ಯಾಚಿಂಗ್ ಇನ್‌ಸೆಂಟಿವ್ ನೀಡುವ ಯೋಜನೆಯನ್ನು